ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಕೆ.ಸಿ ಕೊಂಡಯ್ಯ
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 769
ಉತ್ತರಿಸಬೇಕಾದ ದಿನಾಂಕ : 15.12.2020

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಆತ್ಮನಿರ್ಭರ ಯೋಜನೆಯಡಿ ಸಹಕಾರ ಕ್ಷೇತ್ರಕ್ಕೆ ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಅನುದಾನದ ಮೊತ್ತವೆಷ್ಟು;	ಆತ್ಮನಿರ್ಭರ ಯೋಜನೆಯಡಿ ಕೇಂದ್ರ ಸರ್ಕಾರ ಸಹಕಾರ ಕ್ಷೇತ್ರಕ್ಕೆ ನಬಾರ್ಡ್ ಮೂಲಕ ಪ್ರತಿ ವರ್ಷ ನೀಡುವ ಪುನರ್ಧನದೊಂದಿಗೆ ಹೆಚ್ಚುವರಿಯಾಗಿ 'Special liquidity fund' ಅಡಿಯಲ್ಲಿ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಸಕಾಲದಲ್ಲಿ ಬೆಳೆ ಸಾಲ ಒದಗಿಸಲು ಮತ್ತು ಹಾಲು ಉತ್ಪಾದಕರಿಗೆ ಹಾಗೂ ಮೀನುಗಾರರಿಗೆ ಪಶುಸಂಗೋಪನೆಗೆ ದುಡಿಯುವ ಬಂಡವಾಳ ಸಾಲ ಒದಗಿಸಲು ರೂ.1700 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.
ಆ)	ಸದರಿ ಮೊತ್ತದಲ್ಲಿ ಕೈಗೊಳ್ಳಲಾಗುವ ಕಾರ್ಯಕ್ರಮಗಳೇನು; ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯ ಕ್ರಮವೇನು;	ಸದರಿ ಕಾರ್ಯಕ್ರಮಗಳು ಮತ್ತು ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯನ್ನು ಈ ಕೆಳಗಿನಂತೆ ನೀಡಲಾಗಿದೆ. 1. <u>ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಸಕಾಲದಲ್ಲಿ ಬೆಳೆ ಸಾಲ:-</u> ಈ ಯೋಜನೆಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ರೈತರು ರೂ.3.00 ಲಕ್ಷಗಳವರೆಗಿನ ನಿವ್ವಳ ಶೇ.4 ರ ಬಡ್ಡಿ ದರದಲ್ಲಿ (ರಾಜ್ಯ ಸರ್ಕಾರದಿಂದ ನಿವ್ವಳ ಶೂನ್ಯ ಬಡ್ಡಿ ದರ) ಕಿಸಾನ್ ಕ್ರೆಡಿಟ್ ಕಾರ್ಡ್ ಮೂಲಕ ಬೆಳೆ ಸಾಲ ಪಡೆಯಲು ಅರ್ಜಿ ಸಲ್ಲಿಸಬಹುದಾಗಿದೆ. 2. <u>ಹಾಲು ಉತ್ಪಾದಕ ಸಹಕಾರ ಸಂಘಗಳಲ್ಲಿನ ಹಾಲು ಉತ್ಪಾದಕರಿಗೆ ಮತ್ತು ಮೀನುಗಾರರಿಗೆ ದುಡಿಯುವ ಬಂಡವಾಳಕ್ಕಾಗಿ ಸಾಲ:-</u> ಹಾಲು ಉತ್ಪಾದಕ ಸಹಕಾರ ಸಂಘಗಳು ಹಾಲು ಉತ್ಪಾದಕರಿಂದ ಅರ್ಜಿ ಪಡೆದು ಸಂಬಂಧಿಸಿದ ಬಟವಾಡೆ ಆಗುವ ಡಿಸಿಸಿ ಬ್ಯಾಂಕುಗಳಿಗೆ ಸಲ್ಲಿಸಿ ಗರಿಷ್ಟ ರೂ.2.00 ಲಕ್ಷಗಳವರೆಗಿನ ಸಾಲವನ್ನು ನಿವ್ವಳ ಶೇ4 ರ ಬಡ್ಡಿ ದರದಲ್ಲಿ (ರಾಜ್ಯ ಸರ್ಕಾರದಿಂದ ಶೂನ್ಯ ಬಡ್ಡಿ ದರ) ಪಡೆಯಲು ಯೋಜನೆ ಇರುತ್ತದೆ.
ಇ)	ಸಹಕಾರ ರಂಗದಲ್ಲಿನ ಯಾವ ಯಾವ ಕಸುಬುದಾರರಿಗೆ ಅಥವಾ ಕ್ಷೇತ್ರದವರಿಗೆ ಈ ಯೋಜನೆಯ ಲಾಭ ದೊರೆಯಲಿದೆ?	ಮೇಲಿನ ಯೋಜನೆಗಳಲ್ಲಿ ಸಹಕಾರ ರಂಗದಲ್ಲಿ ಈ ಕೆಳಕಂಡ ಫಲಾನುಭವಿಗಳಿಗೆ ಲಾಭ ದೊರೆಯಲಿದೆ. 1. <u>ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಸಕಾಲದಲ್ಲಿ ಬೆಳೆ ಸಾಲ</u> ಈ ಯೋಜನೆಯು ಹೆಚ್ಚಿನ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಲಾಭವಾಗಲಿದೆ. 2. <u>ಹಾಲು ಉತ್ಪಾದಕ ಸಹಕಾರ ಸಂಘಗಳಲ್ಲಿನ ಹಾಲು ಉತ್ಪಾದಕರಿಗೆ ಮತ್ತು ಮೀನುಗಾರರಿಗೆ ದುಡಿಯುವ ಬಂಡವಾಳಕ್ಕಾಗಿ ಸಾಲ</u> ಈ ಯೋಜನೆಯು ಹಾಲು ಉತ್ಪಾದಕರು ಮತ್ತು ಮೀನುಗಾರರಿಗೆ ಹಾಗೂ ಹಾಲು ಉತ್ಪಾದಕ ಸಹಕಾರ ಸಂಘಗಳಿಗೆ ಲಾಭವಾಗಲಿದೆ.

ಸಂಖ್ಯೆ: ಸಿಒ 413 ಸಿಎಲ್‌ಎಸ್ 2020

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು